# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1963 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕ್‌ಗಳು Collateral- Free Loans ಗಳಿಗಾಗಿ, ವಿಶೇಷವಾಗಿ ಸೂಕ್ಷ್ಮ ಘಟಕಗಳಲ್ಲಿ (Micro Units) CGTMSE (Credit Guarantee Fund Trust for Micro and Small Enterprises) ಯೋಜನೆಯನ್ನು ವಾಸ್ತವಿಕವಾಗಿ ಸರ್ಕಾರ ಜಾರಿಗೆ ತರುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ; | ರಾಜ್ಯದಲ್ಲಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳು ಸಾಲ ಕೋರುವ ಸಂದರ್ಭದಲ್ಲಿ ಬ್ಯಾಂಕ್‌ಗಳು ಚಾಲ್ತಿಯಲ್ಲಿರುವ CGTMSE (Credit Guarantee Fund Trust for Micro and Small Enterprises) ಮಾರ್ಗಸೂಚಿಗಳ ಪ್ರಕಾರ, ರೂ.10 ಕೋಟಿವರೆಗಿನ ಸಾಲಗಳಿಗೆ ಬ್ಯಾಂಕುಗಳು ಮೇಲಾಧಾರವನ್ನು (Collateral) ಪಡೆಯದೇ ಸಾಲವನ್ನು ಮಂಜೂರು ಮಾಡಲು Guarantee Coverage ನೀಡಲಾಗುತ್ತಿದೆ.<br><br>ಸರ್ಕಾರದ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ಜರುಗುವ SLBC Sub Committee on MSME ಸಭೆಗಳಲ್ಲಿ ಮತ್ತು Regional Director RBI Bengaluru ರವರ ಅಧ್ಯಕ್ಷತೆಯಲ್ಲಿ ಜರುಗುವ Empowered Committee Meeting on MSME ಗಳಲ್ಲಿ ಬ್ಯಾಂಕಿನ ಸಾಲ ವಿತರಣೆ ಬಗ್ಗೆ ಚರ್ಚಿಸಿ, ಉಸ್ತುವಾರಿ ನಿರ್ವಹಿಸಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳ ಮೇಲಿನ ಹೆಚ್ಚಿನ ಆರ್ಥಿಕ ಒತ್ತಡವನ್ನು ಕಡಿಮೆ ಮಾಡಲು 2026-27ನೇ ಸಾಲಿನ ಆಯ-ವ್ಯಯದಲ್ಲಿ ಯಾವ ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ; | ಸರ್ಕಾರವು ಜಾರಿಗೆ ತಂದಿರುವ ಕೈಗಾರಿಕಾ ನೀತಿ 2025-30 ರಡಿಯಲ್ಲಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳನ್ನು ಸ್ಥಾಪಿಸುವ ಘಟಕಗಳಿಗೆ ಈ ಕೆಳಕಂಡ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕಲ್ಪಿಸಲಾಗಿದೆ.<br><br>1. ಬಂಡವಾಳ ಹೂಡಿಕೆ ಸಹಾಯಧನ/ ವಹಿವಾಟು ಆಧಾರಿತ ಹೂಡಿಕೆ ಸಹಾಯಧನ.<br>2. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ರಿಯಾಯಿತಿ.<br>3. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ.<br>5. ವಿದ್ಯುತ್ ಚ್ಛಕ್ತಿ ಸಹಾಯಧನ.<br>6. ತಂತ್ರಜ್ಞಾನ ಅಳವಡಿಕೆ & ನವೋನ್ವೇಶಣೆ ಉತ್ತೇಜನ<br>7. ರಫ್ತು ಘಟಕಗಳಿಗೆ ಪ್ರೋತ್ಸಾಹ.<br>8. ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ ಉತ್ತೇಜನ<br>9. ಲಾಜಿಸ್ಟಿಕ್ಸ್ ಮತ್ತು ಉಗ್ರಾಣ ಸಹಾಯಧನ |
| ಇ) | ಸಣ್ಣ ಕೈಗಾರಿಕೆ ಕ್ಷೇತ್ರದಲ್ಲಿ ನುರಿತ ಕಾರ್ಮಿಕರ ಅಭಾವವನ್ನು ನೀಗಿಸಲು ಸರ್ಕಾರ 2026-27ನೇ ಸಾಲಿನ ಆಯ-ವ್ಯಯದಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ? ಮಾಹಿತಿ ನೀಡುವುದು; | ಇಲ್ಲ. |

ಸಿಐ 105 ಸಿಎಸ್‌ಸಿ 2026

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.